# ನಗರಸಭಾ ಕಾರ್ಯಾಲಯ, ಶಿರಸಿ (ಉ.ಕ.)

ಸಂ. ನಸಶಿ/ತೆರಿಗೆ/ಮ.ಲೈ./ಟೆಂಡರು/ವಿವ–1/2008-09 ದಿನಾಂಕ: 14.10.2009.

## ಮಳಿಗೆಗಳ ಟೆಂಡರು–ಕಂ–ಹರಾಜು ಪ್ರಕಟಣೆ 2ನೇ ಕರೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಸಿ.ಟಿ.ಎಸ್. ಸಂ. 977 & 978 ರಲ್ಲಿಯ ಎಸ್.ಎಫ್.ಸಿ. ಹಾಗೂ ಐ.ಡಿ.ಎಸ್.ಎಮ್.ಟಿ. ಅನುದಾನದಲ್ಲಿ ಕಟ್ಟಿದ ಸುಭಾಷಚಂದ್ರ ಬೋಸ್ ವಾಣಿಜ್ಯ ಸಂಕೀರ್ಣದ ನೆಲ ಮಹಡಿಯಲ್ಲಿ 18 ಅಂಗಡಿಗಳು ಹಾಗೂ ಮೊದಲನೇ ಮಹಡಿಯಲ್ಲಿ 8 ಅಂಗಡಿ ಮಳಿಗೆಗಳನ್ನು ತಿಂಗಳ ಬಾಡಿಗೆ ಆಧಾರದ ಮೇಲೆ 20 ವರ್ಷಗಳ ಅವಧಿಗಾಗಿ ಟೆಂಡರು–ಕಂ–ಹರಾಜು ಮೂಲಕ ವಿಲೇವಾರಿ ಮಾಡಲು ತೀರ್ಮಾನಿಸಲಾಗಿದೆ. ಮಳಿಗೆಗಳನ್ನು ಪಡೆಯಲಿಚ್ಛಿಸುವವರು ಒಂದು ದಿನ ಮುಂಚಿತವಾಗಿ ಫಾರ್ಮಗಾಗಿ ಲಿಖಿತ ಅರ್ಜಿಯನ್ನು ನೀಡಿ ಟೆಂಡರು ಫಾರ್ಮ ಪಡೆದು ದಿನಾಂಕ: 16-11-2009 ರಂದು ಬೆಳಿಗ್ಗೆ: 11:00 ಗಂಟೆಗೆ ಕಟ್ಟಡದ ಸ್ಥಳದಲ್ಲಿ ಜರುಗಲಿರುವ ಬಹಿರಂಗ ಟೆಂಡರು–ಕಂ–ಹರಾಜು ಪ್ರಕ್ರಿಯೆಲ್ಲಿ ಭಾಗವಹಿಸಿ ವಾಣಿಜ್ಯ ಮಳಿಗೆಯ ಸ್ಟಾಲ್‌ಗಳನ್ನು ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ನಗರಸಭೆಗೆ ಬಂದು ಕಂದಾಯ ಅಧಿಕಾರಿಗೆ ಭೇಟಿಯಾಗಿ ತಿಳಿದುಕೊಳ್ಳಬಹುದು. ಇಲ್ಲವೆ ದೂರವಾಣಿ ಸಂಖ್ಯೆ 08384-226338ನೇದಕ್ಕೆ ಸಂಪರ್ಕಿಸಬಹುದು.

**ಅಂಗಡಿ ಮಳಿಗೆಗಳ ವಿವರ:**

| ಅ.ಸಂ. | ಮಳಿಗೆಗಳ ವಿವರ | ಮಳಿಗೆಗಳು | ಮಳಿಗೆ ಅಳತೆ (ಮೀ. ಗಳಲ್ಲಿ) | ಮರುಪಾವತಿ ಯಿಲ್ಲದ ಕನಿಷ್ಠ ಪ್ರಿಮೀಯಂ (ಪ್ರತಿ ಮಳಿಗೆಗೆ) | ಪ್ರತಿ ತಿಂಗಳ ಬಾಡಿಗೆ (ರೂ. ಗಳಲ್ಲಿ) ಪ್ರತಿ ಮಳಿಗೆಗೆ |
|---|---|---|---|---|---|
| **ನೆಲ ಮಹಡಿ:–** | | | | | |
| 1 | ವಾಣಿಜ್ಯ ಮಳಿಗೆ ಸಂಖ್ಯೆ 07 | 01 ಅಂಗಡಿ | 3.00x3.30 Mtr. | 2,00,000-00 | 1,700-00 |
| 2 | ವಾಣಿಜ್ಯ ಮಳಿಗೆ ಸಂಖ್ಯೆ 13 | 01 ಅಂಗಡಿ | 3.00x3.30 Mtr. | 1,75,000-00 | 1,700-00 |
| 3 | ವಾಣಿಜ್ಯ ಮಳಿಗೆ ಸಂಖ್ಯೆ 14 | 01 ಅಂಗಡಿ | 3.00x3.30 Mtr. | 1,75,000-00 | 1,700-00 |
| 4 | ವಾಣಿಜ್ಯ ಮಳಿಗೆ ಸಂಖ್ಯೆ 15 | 01 ಅಂಗಡಿ | 3.00x4.90 Mtr. | 1,75,000-00 | 2,000-00 |
| 5 | ವಾಣಿಜ್ಯ ಮಳಿಗೆ ಸಂಖ್ಯೆ 16 | 01 ಅಂಗಡಿ | 3.00x4.90 Mtr. | 1,75,000-00 | 2,000-00 |
| 6 | ವಾಣಿಜ್ಯ ಮಳಿಗೆ ಸಂಖ್ಯೆ 17 | 01 ಅಂಗಡಿ | 1.50x3.25 Mtr. | 50,000-00 | 850-00 |
| 7 | ವಾಣಿಜ್ಯ ಮಳಿಗೆ ಸಂಖ್ಯೆ 18 | 01 ಅಂಗಡಿ | 1.50x3.25 Mtr. | 50,000-00 | 850-00 |
| 8 | ವಾಣಿಜ್ಯ ಮಳಿಗೆ ಸಂಖ್ಯೆ 19 | 01 ಅಂಗಡಿ | 1.50x3.25 Mtr. | 50,000-00 | 850-00 |
| 9 | ವಾಣಿಜ್ಯ ಮಳಿಗೆ ಸಂಖ್ಯೆ 26 | 01 ಅಂಗಡಿ | 1.50x3.25 Mtr. | 50,000-00 | 850-00 |
| 10 | ವಾಣಿಜ್ಯ ಮಳಿಗೆ ಸಂಖ್ಯೆ 27 | 01 ಅಂಗಡಿ | 1.50x3.25 Mtr. | 50,000-00 | 850-00 |
| 11 | ವಾಣಿಜ್ಯ ಮಳಿಗೆ ಸಂಖ್ಯೆ 28 | 01 ಅಂಗಡಿ | 1.50x3.25 Mtr. | 50,000-00 | 850-00 |
| 12 | ವಾಣಿಜ್ಯ ಮಳಿಗೆ ಸಂಖ್ಯೆ 29 | 01 ಅಂಗಡಿ | 1.50x3.25 Mtr. | 50,000-00 | 850-00 |

| | | | | | |
|---|---|---|---|---|---|
| 13 | ವಾಣಿಜ್ಯ ಮಳಿಗೆ ಸಂಖ್ಯೆ 30 | 01 ಅಂಗಡಿ | 1.50x3.25 Mtr. | 50,000-00 | 850-00 |
| 14 | ವಾಣಿಜ್ಯ ಮಳಿಗೆ ಸಂಖ್ಯೆ 31 | 01 ಅಂಗಡಿ | 1.50x3.25 Mtr. | 50,000-00 | 850-00 |
| 15 | ವಾಣಿಜ್ಯ ಮಳಿಗೆ ಸಂಖ್ಯೆ 32 | 01 ಅಂಗಡಿ | 1.50x3.25 Mtr. | 50,000-00 | 850-00 |
| 16 | ವಾಣಿಜ್ಯ ಮಳಿಗೆ ಸಂಖ್ಯೆ 33 | 01 ಅಂಗಡಿ | 1.50x3.25 Mtr. | 50,000-00 | 850-00 |
| 17 | ವಾಣಿಜ್ಯ ಮಳಿಗೆ ಸಂಖ್ಯೆ 34 | 01 ಅಂಗಡಿ | 1.50x3.25 Mtr. | 50,000-00 | 850-00 |
| 18 | ವಾಣಿಜ್ಯ ಮಳಿಗೆ ಸಂಖ್ಯೆ 35 | 01 ಅಂಗಡಿ | 1.50x3.25 Mtr. | 50,000-00 | 850-00 |
| **ಮೊದಲ ಮಹಡಿ:–** | | | | | |
| 19 | ವಾಣಿಜ್ಯ ಮಳಿಗೆ ಸಂಖ್ಯೆ 102 | 01 ಅಂಗಡಿ | 4.90x3.00 Mtr. | 1,50,000-00 | 2,000-00 |
| 20 | ವಾಣಿಜ್ಯ ಮಳಿಗೆ ಸಂಖ್ಯೆ 103 | 01 ಅಂಗಡಿ | 4.90x3.00 Mtr. | 1,50,000-00 | 2,000-00 |
| 21 | ವಾಣಿಜ್ಯ ಮಳಿಗೆ ಸಂಖ್ಯೆ 105 | 01 ಅಂಗಡಿ | 6.30x7.30 Mtr. | 4,70,000-00 | 6,300-00 |
| 22 | ವಾಣಿಜ್ಯ ಮಳಿಗೆ ಸಂಖ್ಯೆ 110 | 01 ಅಂಗಡಿ | 6.30x7.60 Mtr. | 4,90,000-00 | 6,550-00 |
| 23 | ವಾಣಿಜ್ಯ ಮಳಿಗೆ ಸಂಖ್ಯೆ 112 | 01 ಅಂಗಡಿ | 3.00x3.75 Mtr. | 1,50,000-00 | 1,500-00 |
| 24 | ವಾಣಿಜ್ಯ ಮಳಿಗೆ ಸಂಖ್ಯೆ 113 | 01 ಅಂಗಡಿ | 3.00x3.75 Mtr. | 1,50,000-00 | 1,500-00 |
| 25 | ವಾಣಿಜ್ಯ ಮಳಿಗೆ ಸಂಖ್ಯೆ 114 | 01 ಅಂಗಡಿ | 3.00x3.75 Mtr. | 1,50,000-00 | 1,500-00 |
| 26 | ವಾಣಿಜ್ಯ ಮಳಿಗೆ ಸಂಖ್ಯೆ 115 | 01 ಅಂಗಡಿ | 3.00x3.75 Mtr. | 1,50,000-00 | 1,500-00 |

***ಕಾದಿಟ್ಟ ಮಳಿಗೆಗಳ ವಿವರ:–***

1. ಪರಿಶಿಷ್ಟ ಜಾತಿಯವರಿಗೆ : ಮಳಿಗೆ ನಂ. 13,14,17,102,114 :ಒಟ್ಟೂ 05 ಮಳಿಗೆಗಳು.
2. ಅಂಗವಿಕಲರಿಗೆ : ಮಳಿಗೆ ನಂ. 18 : ಒಟ್ಟೂ 01 ಮಳಿಗೆ.
3. ಸ್ತ್ರೀ ಶಕ್ತಿ ಮಹಿಳಾ ಸಂಘಗಳಿಗೆ : 19 : ಒಟ್ಟೂ 01ಮಳಿಗೆಗಳು.
4. ಟೆಂಡರು–ಕಂ–ಹರಾಜು ನಡೆಯುವ ದಿನಾಂಕ ಹಾಗೂ ಸ್ಥಳ : 16–11–2009, ಬೆಳಿಗ್ಗೆ: 11:00 ಘಂಟೆ ನಂತರ **ನಗರಸಭಾ ಸಭಾ ಭವನ, ಶಿರಸಿ**

***ಟೆಂಡರು ಪ್ರಕ್ರಿಯೆಯ ವೇಳಾ ಪಟ್ಟಿ:***

1. ಟೆಂಡರು ಫಾರ್ಮ ಪಡೆಯಲು ಅರ್ಜಿ ಕೊಡುವ ದಿನಾಂಕ: 15-10-2009 ರಿಂದ 13-11-2009ವರೆಗೆ ಬೆಳಿಗ್ಗೆ 10:15 ರಿಂದ ಸಂಜೆ: 4:30 ಗಂಟೆಯೊಳಗೆ. (ರಜಾ ದಿನಗಳನ್ನು ಹೊರತುಪಡಿಸಿ)

2. ಖಾಲಿ ಟೆಂಡರ್ ಫಾರ್ಮ ಕೊಡಲು ಕೊನೆಯ ದಿನಾಂಕ: 13-11-2009, ಬೆಳಿಗ್ಗೆ 10:15 ರಿಂದ ಸಂಜೆ: 4:30 ಗಂಟೆಯೊಳಗೆ.

3. ಭರ್ತಿ ಮಾಡಿದ ಟೆಂಡರ್ ಫಾರ್ಮ ಟೆಂಡರು ಪೆಟ್ಟಿಗೆಯಲ್ಲಿ ಹಾಕುವ ದಿನಾಂಕ: 16-11-2009, ಬೆಳಿಗ್ಗೆ: 11:00 ಗಂಟೆಯವರೆಗೆ ತದನಂತರ ಸವಾಲು.

4. ಖಾಲಿ ಟೆಂಡರ್ ಫಾರ್ಮ ಬೆಲೆ ರೂ. 100-00.

**ಶರತ್ತುಗಳು:-**

1. ಟೆಂಡರು ಹಾಗೂ ಬಹಿರಂಗ ಹರಾಜನ್ನು ಮರುಪಾವತಿಯಿಲ್ಲದ ಪ್ರೀಮಿಯಂ ಹಣದ ಮೇಲೆ ಮಾಡಲಾಗುವುದು.
2. ಅರ್ಜಿ ಫಾರ್ಮಿನ ಪಕ್ಕ ಪ್ರತಿಯನ್ನು (ಕೌಂಟರ್ ಫಾಯಿಲ್) ಪಡೆದು ಕಾದಿಟ್ಟ ಮಳಿಗೆ ಬಿಟ್ಟು ಎಲ್ಲ ಮಳಿಗೆಗಳಿಗೆ ಟೆಂಡರು ಹಾಗೂ ಹರಾಜಿನಲ್ಲಿ ಭಾಗವಹಿಸಲು ಅರ್ಹರಿರುತ್ತಾರೆ. ಪ್ರತಿಯೊಬ್ಬರಿಗೆ ಒಂದು ಟೆಂಡರು ಫಾರ್ಮ ನೀಡಲಾಗುವುದು. (ಒಂದು ಮಳಿಗೆಗೆ ಮಾತ್ರ)
3. ಅಂಗಡಿ ಕಬ್ಜಾ ಪಡೆದು ಕರಾರು ಮಾಡಿಕೊಂಡ ದಿನಾಂಕದಿಂದ ಲೈಸರ್ನ್ಸ್ ಅವಧಿಯು 20 ವರ್ಷಗಳಿಗೆ ಇರುತ್ತದೆ.
4. ಭಾಡಿಗೆ ಪ್ರತಿ ತಿಂಗಳ 5ನೇ ತಾರೀಖಿನ ಒಳಗಾಗಿ ನಗರಸಭೆಯಲ್ಲಿ ಪಾವತಿಸಿ ರಸೀದಿಯನ್ನು ಪಡೆಯತಕ್ಕದ್ದು. ಒಂದು ವೇಳೆ ಮೂರು ತಿಂಗಳವರೆಗೂ ಲೈಸನ್ಸ್ ಫೀಯನ್ನು ಪಾವತಿಸದೇ ಇದ್ದಲ್ಲಿ, ಅಂತವರ ಅಂಗಡಿಯನ್ನು ನಗರಸಭೆಯಿಂದ ಕೀಲಿ ಹಾಕಿ, ಸೀಜ್ ಮಾಡಿ, ಡಿಫಾಲ್ಟರ್ ಎಂದು ಘೋಷಿಸಿ, ಪ್ರೀಮಿಯಂ ಹಣವನ್ನು ಮುಟ್ಟುಗೋಲು ಹಾಕಿಕೊಂಡು, ಹರಾಜು ರದ್ದುಪಡಿಸಿ, ಹೊಸದಾಗಿ ಮರು-ಹರಾಜು ಮಾಡಲಾಗುವುದು.
5. ಪ್ರತಿ ವರ್ಷಕ್ಕೊಮ್ಮೆ ನಿಗದಿಪಡಿಸಿದ ಲೈಸನ್ಸ್ ಫೀ ಮೇಲೆ ಶೇ. 3 ರಷ್ಟು ಹೆಚ್ಚಳ ಮಾಡಲಾಗುವುದು.
6. ಯಶಸ್ವಿ ಬಿಡ್‌ದಾರರು ಹರಾಜಾದ ಪ್ರೀಮಿಯಂ ಮೊತ್ತದ ಶೇ. 10 ರಷ್ಟು ಮೊತ್ತವನ್ನು ಅದೇ ದಿವಸ ನಗರಸಭೆಗೆ ಸಂದಾಯ ಮಾಡಿ ಪಾವತಿ ಪಡೆಯತಕ್ಕದ್ದು. ಉಳಿದ ಶೇ. 90 ರಷ್ಟು ಪ್ರೀಮಿಯಂ ಹಣವನ್ನು ಟೆಂಡರು ಮಂಜೂರಾದ ನಂತರ 7 ದಿನಗಳೊಳಗಾಗಿ ಹಣವನ್ನು ನಗರಸಭೆಗೆ ಸಂದಾಯ ಮಾಡಬೇಕು. ಕಟ್ಟಡ ಕಬ್ಜಾ ಪಡೆದುಕೊಂಡು ಕರಾರು ಪತ್ರ ಮಾಡುವ ದಿನಾಂಕದಿಂದ ಬಾಡಿಗೆ ಸಂದಾಯ ಮಾಡುವುದು ಯಶ್ವಸಿ ಬಿಡ್ ದಾರರು ಜವಾಬ್ದಾರಿಯಾಗಿರುತ್ತದೆ.
7. ಯಶಸ್ವಿ ಬಿಡ್‌ದಾರರು ರೂ. 200-00 ಮೌಲ್ಯದ ಛಾಪಾ ಕಾಗದದ ಮೇಲೆ ನಗರಸಭೆಯು ವಿಧಿಸಿದ ಯಾವತ್ತೂ ಶರತ್ತುಗಳನ್ನು ಪಾಲಿಸುವುದಾಗಿ ತಮ್ಮ ಸ್ವಂತ ಖರ್ಚಿನಲ್ಲಿ ಕರಾರು ಬರೆದುಕೊಡತಕ್ಕದ್ದು.
8. ಯಾವುದೇ ಕಾರಣಕ್ಕೂ ಮಳಿಗೆಗಳನ್ನು ಪರಭಾರೆ ಮಾಡುವ ಅಥವಾ ಒಳಕರಾರು ಮಾಡಿಕೊಡತಕ್ಕದ್ದಲ್ಲ. ಅಂತಹ ಪ್ರಸಂಗ ಕಂಡು ಬಂದಲ್ಲಿ ಶರ್ತು ಉಲ್ಲಂಘನೆ ಆಗಿದೆಯೆಂದು ಪರಿಗಣಿಸಿ ಲೈಸರ್ನ್ಸನ್ನು ರದ್ದುಪಡಿಸಲಾಗುವುದು. ಮತ್ತು ಪ್ರೀಮಿಯಂ ಹಣವನ್ನು ಮುಟ್ಟುಗೋಲು ಹಾಕಿಕೊಂಡು, ಅಂಗಡಿಯನ್ನು ನಗರಸಭೆ ತಾಬೆಗೆ ತೆಗೆದುಕೊಳ್ಳಲಾಗುವುದು. ಹಾಗೂ ಮರು-ಹರಾಜು ಪ್ರಕ್ರಿಯೆ ಜರುಗಿಸಲಾಗುವುದು.
9. ಅಂಗಡಿ ಮಳಿಗೆಯಲ್ಲಿ ಬಳಸಿದ ವಿದ್ಯುಚ್ಛಕ್ತಿ ಬಿಲ್, ಯಶಸ್ವಿ ಬಿಡ್‌ದಾರರು, ಸಂಬಂಧಪಟ್ಟ ಇಲಾಖೆಯ ನಿಯಮಾನುಸಾರ ಭರಿಸತಕ್ಕದ್ದು.
10. ಯಶಸ್ವಿ ಬಿಡ್‌ದಾರರು ಬಾಡಿಗೆ ಪಡೆದ ಮಳಿಗೆಯಲ್ಲಿ ಯಾವುದೇ ತರಹದ ಕಾನೂನು ಬಾಹಿರ ಚುಟುವಟಿಕೆಗಳನ್ನು ಮಾಡಬಾರದು. ಅದಕ್ಕೆ ಅವರ ಸ್ವಂತ ಜವಾಬ್ದಾರಿ. ಅಂತಹ ಪ್ರಕರಣ ಕಂಡುಬಂದರೆ ಯಾವುದೇ ಸೂಚನೆ ನೀಡದೆ ಮಳಿಗೆಯನ್ನು ನಗರಸಭೆ ವಶಕ್ಕೆ ಪಡೆಯಲಾಗುವುದು.
11. ಯಶಸ್ವಿ ಬಿಡ್‌ದಾರರು ಬಾಡಿಗೆ ಪಡೆದ ಮಳಿಗೆಯಲ್ಲಿ ಯಾವುದೇ ತರಹದ ಬದಲಾವಣೆ, ಕಟ್ಟಡದ ಪರಿವರ್ತನೆ ಮಾಡತಕ್ಕದ್ದಲ್ಲ. ಒಂದು ವೇಳೆ ಹೆಚ್ಚಿನ ವ್ಯವಸ್ಥೆ ಅವಶ್ಯವಿದ್ದಲ್ಲಿ ನಗರಸಭೆಯಿಂದ ಅನುಮತಿ ಪಡೆದು ವ್ಯವಸ್ಥೆ ಮಾಡಿಕೊಳ್ಳಬಹುದು.
12. ಯಶಸ್ವಿ ಬಿಡ್‌ದಾರರು ನಗರಸಭೆಯ ಟ್ರೇಡ್ ಲೈಸನ್ಸ್ ಕಾಯ್ದೆಯನ್ವಯ ಲೈಸನ್ಸ್ ಪಡೆದು ವ್ಯಾಪಾರ ಉದ್ಯೋಗ ಮಾಡತಕ್ಕದ್ದು.
13. ಯಶಸ್ವಿ ಬಿಡ್‌ದಾರರು ಸರ್ಕಾರ ಮತ್ತು ನಗರಸಭೆಯು ಕಾಲ-ಕಾಲಕ್ಕೆ ವಿಧಿಸಿದ ಶರ್ತುಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.
14. ಟೆಂಡರು ಮತ್ತು ಹರಾಜಿನ ವಿವರವಾದ ಶರತ್ತುಗಳನ್ನು ಅರ್ಜಿ ಫಾರ್ಮಿನ ಜೊತೆಗೆ ನೀಡಲಾಗುತ್ತಿದ್ದು, ಅವುಗಳನ್ನು ಟೆಂಡರುದಾರರು ಪಾಲಿಸತಕ್ಕದ್ದು.
15. ಟೆಂಡರು ಪ್ರಕ್ರಿಯೆಯಲ್ಲಿ ನಡೆದ ಬಿಡ್ಡನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ನಗರಸಭೆ ಕಾದಿರಿಸಿಕೊಂಡಿದೆ.
16. ನಗರಸಭೆಗೆ ಯಾವುದೇ ತರಹದ ಬಾಕಿದಾರರಾಗಿದ್ದಲ್ಲಿ ಟೆಂಡರ್‌ನಲ್ಲಿ ಭಾಗವಹಿಸಲು ಅವಕಾಶ ಇರುವುದಿಲ್ಲ.
17. ಹರಾಜಿನ ದಿನದಂದು 18 ವಯಸ್ಸು ಆದವರು ಹರಾಜಿನಲ್ಲಿ ಭಾಗವಹಿಸಲು ಅರ್ಹರಿರುತ್ತಾರೆ.
18. ಟೆಂಡರು-ಕಂ-ಹರಾಜಿನಲ್ಲಿ ಭಾಗವಹಿಸುವವರು ಟೆಂಡರು ಫಾರ್ಮ ಅರ್ಜಿ ಕೊಡುವಾಗ ರೂ. 50,000-00 ಮೌಲ್ಯದ ರಾಷ್ಟ್ರೀಕೃತ ಬ್ಯಾಂಕಿನ ಡಿ.ಡಿ. ಪೌರಾಯುಕ್ತರ ಹೆಸರಿನಲ್ಲಿ ತೆಗೆದು ಟೆಂಡರು ಫಾರ್ಮಿಗೆ ಅರ್ಜಿ ಕೊಡುವಾಗ ನೀಡತಕ್ಕದ್ದು. ಪ.ಜಾ. ವರ್ಗದವರು/ಅಂಗವಿಕಲರಿಗೆ/ಸ್ತ್ರೀ ಶಕ್ತಿ ಸಂಘದವರಿಗೆ ನಿಗದಿಪಡಿಸಿದ **ಡಿ.ಡಿ. ಮೊತ್ತದ ಶೇ.**

**<u>50%ರಷ್ಟು (ಕಾಯ್ದಿಟ್ಟ ಮಳಿಗೆಗೆ ಮಾತ್ರ) ಡಿ.ಡಿ. ಯನ್ನು ನೀಡತಕ್ಕದ್ದು. ಪ್ರಿಮೀಯಂನಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.</u>**

19. ಪ.ಜಾ.:ಪ.ಪಂ. ವರ್ಗದವರು/ಅಂಗವಿಕಲರು/ಸ್ತ್ರೀ ಶಕ್ತಿ ಸಂಘದವರು ಅರ್ಜಿಯ ಲಗ್ತ ಜಾತಿ ಪ್ರಮಾಣ ಪತ್ರ ಹಾಗೂ ಅಂವವಿಕಲ ಪ್ರಮಾಣ, ಸ್ತ್ರೀ ಶಕ್ತಿ ಪ್ರಮಾಣ ಪತ್ರ ಅರ್ಜಿಯ ಜೊತೆಗೆ ಲಗತ್ತಿಸಕ್ಕದ್ದು.
20. ಮಳಿಗೆ ನಂ. 17 ರಿಂದ 19ರವರೆಗೆ ಮತ್ತು 26 ರಿಂದ 35ರ ಮಳಿಗೆಗಳಿಗೆ ರೂ. 25,000–00 ಡಿ.ಡಿ. ನಿಗದಿಗೊಳಿಸಲಾಗಿದೆ.

ಅಧ್ಯಕ್ಷರು,
ನಗರಸಭೆ, ಶಿರಸಿ.

ಪೌರಾಯುಕ್ತರು,
ನಗರಸಭೆ, ಶಿರಸಿ.